೧೯೮೪ನೇ ಮಾರ್ಚ್, ೩೧ ದಿನಾಂಕಕ್ಕೆ ಅಂತ್ಯಗೊಂಡಂತೆ ಬೆಂಗಳೂರಿನ ಮೆಸರ್ಸ್ ಮಾರ್ಕೆಟಿಂಗ್ ಕನ್ಸಲ್ಟೆಂಟ್ ಅಂಡ್ ಪಬ್ಲಿಸಿಸ್ಟ್ ಕಾರ್ಯವೈಕರಿ ಹಾಗೂ ವ್ಯವಹಾರಗಳ ಮೇಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—(ವಾರ್ತಾ, ಯುವಜನ ಸೇವೆಗಳು, ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯಮಂತ್ರಿಗಳಾದ ಡಾ।। ಜೀವರಾಜ ಆಳ್ವರವರ ಪರವಾಗಿ).—

ಮಾನ್ಯ ಅಧ್ಯಕ್ಷರೆ, ೧೯೬೪ನೇ ಇಸವಿಯ ಕರ್ನಾಟಕ ಚಲನಚಿತ್ರ (ನಿಯಂತ್ರಣ) ಅಧಿನಿಯಮದ ೨೨ನೇ ಕಲಮಿನ ಮೇರೆಗೆ.—

ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ ಸಂಸ್ಥೆಯ ಆವರಣದಲ್ಲಿ, ಮುಖ್ಯ ಆಡಳಿತ ಅಧಿಕಾರಿಯವರ ಹಿಂ ಎಂ. ಎಂ. ನ ಚಲನಚಿತ್ರ ಪ್ರದರ್ಶಿಸಲು ವಿನಾಯಿತಿ ನೀಡುವುದಕ್ಕೆ ೧೯೮೫ನೇ ಆಗಸ್ಟ್ ೨೮ನೇ ದಿನಾಂಕದಂದು ಹೊರಡಿಸಲಾದ ಹೆಚ್.ಡಿ. ೩೫೯ ಸಿಎನ್‌ಎನ್ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯಮಂತ್ರಿಗಳಾದ ಶ್ರೀ ಆರ್. ವಿ. ದೇಶಪಾಂಡೆ ಅವರ ಪರವಾಗಿ).—

ಮಾನ್ಯ ಅಧ್ಯಕ್ಷರೆ, ೧೯೫೬ನೇ ಇಸವಿಯ ಕಂಪನಿಗಳ ಅಧಿನಿಯಮದ ೬೧೯ (ಎ) ಕಲಮಿನ ಮೇರೆಗೆ.—

೧೯೮೪ನೇ ಜೂನ್ ೩೦ನೇ ದಿನಾಂಕಕ್ಕೆ ಅಂತ್ಯಗೊಂಡಂತೆ ಕರ್ನಾಟಕ ರಾಜ್ಯ ಸ್ಮಾಲ್ ಪ್ರಮಾಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಕಾರ್ಯ ವೈಖರಿ ಮತ್ತು ವ್ಯವಹಾರ ಗಳಿಗೆ ಸಂಬಂಧಿಸಿದ ಟಿಪ್ಪಣಿಯೊಂದಿಗೆ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಗಳನ್ನೊಪ್ಪಿಸುವುದು

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೆ, ನೀರಾವರಿ ಇಲಾಖೆಯ, ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳಿಗೆ (ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಹೊರತುಪಡಿಸಿ) ಸಂಬಂಧಿಸಿದಂತೆ ೧೯೭೯-೮೦ ರಿಂದ ೧೯೮೨-೮೩ನೇ ಸಾಲುಗಳ ಧನ ವಿನಿಯೋಗ ಹಾಗೂ ಹಣಕಾಸು ಲೆಕ್ಕಪತ್ರಗಳು ಮತ್ತು ಭಾರತದ ನಿಯತ್ರಕ ಹಾಗೂ ಮಹಾಲೇಕ ಪರೀಕ್ಷಕ (ಸಿಎಜಿ)ರ ವರದಿಗಳ ಮೇಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ೭ನೆಯ ವರದಿಯನ್ನು ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.—ವರದಿಯನ್ನು ಮಂಡಿಸಲಾಯಿತು,

ಶ್ರೀ ಹೆಚ್. ಟಿ. ಕೃಷ್ಣಪ್ಪ (ಸದನದ ಸಮಿತಿಯ ಅಧ್ಯಕ್ಷರು).—ಮಾನ್ಯ ಅಧ್ಯಕ್ಷರೆ,

I present the report of the Special Committee of Legislators constituted to study the incident that took place at Kuduremoti village, Yelburga Taluk, Raichur District.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಶ್ರೀ ಎಸ್. ಬಂಗಾರಪ್ಪ.—ಸನ್ಮಾನ್ಯ ಸಭಾಧ್ಯಕ್ಷರೆ, ಕುದುರೆಮೋತಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ವರದಿಯನ್ನು ಈ ಸದನದಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಮತ್ತು ಈ ಅಧಿವೇಶನ ಮುಗಿಯುವುದರೊಳಗಾಗಿ ಅವಕಾಶವನ್ನು ಕಲ್ಪಿಸಿಕೊಡಬೇಕು.

ಇನ್ನೊಂದು ಪ್ರಮುಖವಾದ ವಿಚಾರವೆಂದರೆ, ಕರ್ನಾಟಕ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಬಂದಿರತಕ್ಕ ವಿಚಾರದಲ್ಲಿ ಸದನದ ಸಮಿತಿಯನ್ನು ನೇಮಕ ಮಾಡಲಾಗಿತ್ತು. ಎರಡು ಪಂಗಡಗಳು ಹೋಗಿ ಸಮೀಕ್ಷೆಯನ್ನು ನಡೆಸಿಕೊಂಡು ಬಂದಿವೆ. ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ರಚಿತವಾದ ಸಮಿತಿಯು ತನ್ನ ಅಂತಿಮ ವರದಿಯನ್ನು ಸಲ್ಲಿಸಿದೆ. ಆ ವರದಿಯನ್ನು ನಾವು ಈ ಸದನದಲ್ಲಿ ಚರ್ಚೆ ಮಾಡದಿದ್ದರೆ, ಈ ಸಮಿತಿಯನ್ನು ನೇಮಕ ಮಾಡಿದ್ದೂ ಪ್ರಯೋಜನ ವಿಲ್ಲದಂತಾಗುತ್ತದೆ. ಯಾವ ಉದ್ದೇಶಕ್ಕೋಸ್ಕರ ಈ ಸಮಿತಿಯನ್ನು ನೇಮಕ ಮಾಡಲಾಯಿತೋ, ಆ ಉದ್ದೇಶ ಸಾರ್ಥಕವಾದಂತಾಗುವುದಿಲ್ಲ. ಆದ್ದರಿಂದ, ತಾವು ಈ ಎರಡೂ ವಿಚಾರಗಳ ಬಗ್ಗೆ ಸದನದಲ್ಲಿ ಸಂಪೂರ್ಣ ಚರ್ಚೆಮಾಡಲು ಅವಕಾಶವನ್ನು ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಆಗಲಿ.

ವಿತ್ತೀಯ ಕಾರ್ಯ ಕಲಾಪಗಳು

೧೯೮೫–೮೬ನೇ ಸಾಲಿನ ಕಾರ್ಮಿಕ, ಸಮಾಜ ಕಲ್ಯಾಣ ಮತ್ತು ಬುಡಕಟ್ಟು ಪ್ರದೇಶಕ್ಕೆ ಸಂಬಂಧಪಟ್ಟ ಬೇಡಿಕೆಗಳ ಸಂಖ್ಯೆ ೬೧, ೬೨, ೬೪, ೬೫—ಇವುಗಳ ಮೇಲಿನ ಮುಂದುವರಿದ ಚರ್ಚೆ.

† ಶ್ರೀ ಧರ್ಮಸಿಂಗ್ (ಜೇವರ್ಗಿ).—ಸನ್ಮಾನ್ಯ ಅಧ್ಯಕ್ಷರೆ, ಇಂದು ನಾವು ಬಹಳ ಮಹತ್ವವಾದ ಇಲಾಖೆಯ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಈಗಾಗಲೇ ಮಂತ್ರಿಗಳು ಸದನದಲ್ಲಿ ತಮ್ಮ ಇಲಾಖೆಯ ಬೇಡಿಕೆಯನ್ನು ಮಂಡಿಸಿದ್ದಾರೆ. ಈ ಬಗ್ಗೆ ಅವರು ತಮ್ಮ ಪರ್‌ಪಾರ್ಮೆನ್ಸ್ ಬಜೆಟ್‌ನ್ನು ಏನು ಕೊಟ್ಟಿದ್ದಾರೆ, ಎಸ್.ಸಿ., ಎಸ್.ಟಿ., ಬ್ಯಾಕ್‌ವರ್ಡ್ ಕ್ಲಾಸ್ ಸಮಾಜಕಲ್ಯಾಣ ಇಲಾಖೆಯ ಬಗ್ಗೆ ತಮ್ಮ ವರದಿಯಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ನೋಡಿದ ಮೇಲೆ ನನಗೆ ಒಂದು ಕಳಕಳಿ ಯಾಗುತ್ತದೆ. ಈ ಸರ್ಕಾರ ಮತ್ತು ಈ ಇಲಾಖೆಯನ್ನು ವಹಿಸಿಕೊಂಡಿರತಕ್ಕಂತಹ ಮಂತ್ರಿಗಳು ಈ ವಿಚಾರದ ಬಗ್ಗೆ ಹೆಚ್ಚಿನ ಚಿಂತನೆಯನ್ನು ಏನೂ ಮಾಡಿಲ್ಲವೆಂಬ ಭಾವನೆ ಬರುತ್ತಿದೆ.

ತಮಗೆ ತಿಳಿದಿರುವಂತೆ, ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಸುಮಾರು ೪ ಕೋಟಿ ಜನ ಸಂಖ್ಯೆ ಏನಿದೆ, ಇದರಲ್ಲಿ ತಮ್ಮ ಖಾತೆಗೆ ಸಂಬಂಧಪಟ್ಟಂತೆ ೨ ಕೋಟಿ ೪೦ ಲಕ್ಷ ಜನ ಯಾರಿದ್ದಾರೆ ಅವರ ಕ್ಷೇಮಾಭಿವೃದ್ಧಿ ಬಗ್ಗೆ ಅವರ ಕಲ್ಯಾಣದ ಬಗ್ಗೆ ವಿಚಾರಮಾಡತಕ್ಕ ಜವಾಬ್ದಾರಿ ತಮ್ಮ ಮೇಲಿದೆ. ಇದು ಬಹಳ ದೊಡ್ಡ ಮಹತ್ವವಾದ ಇಲಾಖೆಯೆಂದು ನಾನು ಈಗಾಗಲೇ ಹೇಳಿದ್ದೇನೆ. ಎಸ್.ಸಿ. ೫೬ ಲಕ್ಷ, ಎಸ್.ಟಿ. ೧೮ ಲಕ್ಷ, ಬ್ಯಾಕ್‌ವರ್ಡ್ ಕ್ಲಾಸ್ ಸಹಾ ಇದರಲ್ಲಿ ಸೇರಿದೆ. ಪರ್ಸೆಂಟೇಜ್ ಪ್ರಕಾರ, ಎಸ್.ಸಿ. ೧೪, ಎಸ್.ಟಿ. ೪, ಬ್ಯಾಕ್‌ವರ್ಡ್ ಕ್ಲಾಸ್ ೨೨ ಪರ್ಸೆಂಟ್ ಇದ್ದಾರೆ. ಒಟ್ಟು ಇವರು ೪೦ ಪರ್ಸೆಂಟ್ ಜನಸಂಖ್ಯೆಯನ್ನು ಹೊಂದಿದ್ದಾರೆ. ನಮ್ಮ ಕರ್ನಾಟಕ ದಲ್ಲಿರತಕ್ಕಂಥ ಜನಸಂಖ್ಯೆ ೩.೮ ಕೋಟಿ. ಇದರಲ್ಲಿ ತಮ್ಮ ಖಾತೆಗೆ ಸಂಬಂಧಪಟ್ಟಂತೆ ಇರತಕ್ಕಂಥ ೨.೪೦ ಕೋಟಿ ಜನಸಂಖ್ಯೆ ಏನಿದೆ, ಇವರಿಗೋಸ್ಕರ ತಾವು ತಮ್ಮ ಇಲಾಖಾವತಿ ಯಾವ ರೀತಿಯ ಕಾರ್ಯಕ್ರಮಗಳನ್ನು ಆಳವಡಿಸಿಕೊಂಡಿದ್ದೀರಿ ಎಂಬುದನ್ನು ನೋಡಿದರೆ, ತಾವು ಈ ದಿಸೆಯಲ್ಲಿ ಯಾವುದೇ ಚಿಂತನೆಯನ್ನೂ ಮಾಡಿಲ್ಲ, ಯಾವುದೇ ರೀತಿಯ ವಿಮರ್ಶೆಯನ್ನೂ ಮಾಡಿಲ್ಲ. ಆದ್ದರಿಂದ ನಿಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಕೂಲಂಕುಷವಾಗಿ ಚರ್ಚೆಮಾಡಿ ಹಿಂದುಳಿದ ವರ್ಗದವರಿಗೆ, ಪರಿಶಿಷ್ಟ ಜಾತಿಯವರಿಗೆ, ಪರಿಶಿಷ್ಟ ಪಂಗಡದವರಿಗೆ ಯಾವರೀತಿ ಕಾರ್ಯಕ್ರಮಗಳನ್ನು ಸರ್ಕಾರ ಆಳವಡಿಸಿಕೊಳ್ಳಬೇಕೆಂಬುದನ್ನು ತೀರ್ಮಾನಿಸಬೇಕೆಂದು ನಾನು ಹೇಳಬಯಸುತ್ತೇನೆ. ೧೯೭೨ನೇ ಇಸವಿಯ ನಂತರ ಕರ್ನಾಟಕ ರಾಜ್ಯದಲ್ಲಿ, ರಾಜಕೀಯ ಬದಲಾವಣೆ ಆಯಿತು. ಅದರ ಹಿನ್ನೆಲೆಯಲ್ಲಿ ೭೩–೭೪ರಲ್ಲಿ ಮಾನ್ಯ ದೇವರಾಜ ಅರಸ್‌ರವರು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾದ ಮೇಲೆ ನಮ್ಮಲ್ಲಿ ಯಾವ ಶ್ರಮಜೀವಿಗಳಿದ್ದಾರೆ, ವ್ಯವಸಾಯ ಕೂಲಿಗಾರರಿದ್ದಾರೆ, ಬಡತನದ ರೇಖೆಯಿಂದ ಕೆಳಗಡೆ ಇರುವವರು ಯಾರಿದ್ದಾರೆ ಈ ಜನರ ಬಗ್ಗೆ ಇದುವರೆಗೂ ಯಾರೂ ಕೂಡ ಚಿಂತನೆಯನ್ನೇ ಮಾಡಿಲ್ಲ, ಇವರಿಗೋಸ್ಕರ ನಾವು ಏನಾದರೊಂದು ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಮನಸ್ಸು ಮಾಡಿದರು. ನಮ್ಮ ರಾಜ್ಯದಲ್ಲಿ ಈ ವರ್ಗದ ಜನ ೬೪ ಪರ್ಸೆಂಟ್ ಇದ್ದಾರೆ, ಎಂದರೆ ಮೂರನೆಯ ಎರಡು ಭಾಗದಷ್ಟು ಜನ ಇವರಿದ್ದಾರೆ. ಇವರ ಏಳಿಗೆಗೋಸ್ಕರ, ಇವರ ಕಲ್ಯಾಣಕ್ಕೋಸ್ಕರ ಒಂದು ಉತ್ತಮ ಯೋಜನೆಯನ್ನು ಹಾಕಿಕೊಳ್ಳಲು ಉದ್ದೇಶವನ್ನಿಟ್ಟುಕೊಂಡು ಈ ಜನರ ಸಮೀಕ್ಷೆಯನ್ನು ಮಾಡುವ ಸಲುವಾಗಿ ಹಾವನೂರ್‌ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಆ ಸಮಿತಿಯವರು ತಮ್ಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಯಾವ ಪಂಗಡ ಸಮಾಜದಲ್ಲಿ